ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	452
2	ಸದಸ್ಯರ ಹೆಸರು	:	ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	19-07-2019
4	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಶಿವಮೊಗ್ಗ ನಗರದಲ್ಲಿ ಪೋಲೀಸರು ರಸ್ತೆಯಲ್ಲಿ ವಾಹನಗಳನ್ನು ತಡೆದು ದಾಖಲೆಗಳ ತಪಾಸಣೆ ಮಾಡಬಾರದೆಂದು, ಸಂಚಾರ ನಿಯಮ ಉಲ್ಲಂಘನೆ ಮಾಡಿದ ಸಮಯದಲ್ಲಿ ಮಾತ್ರ ತಪಾಸಣೆ ಮಾಡಬೇಕೆಂದು ಪೊಲೀಸ್ ಆಯುಕ್ತರು ಸುತ್ತೋಲೆ ಹೊರಡಿಸಿದ್ದರೂ (ಸುತ್ತೋಲೆಯ ಪ್ರತಿಯನ್ನು ಒದಗಿಸುವುದು) ಪೊಲೀಸರು ವಾಹನಗಳನ್ನು ನಿಲ್ಲಿಸಿ ದಾಖಲೆಗಳ ತಪಾಸಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ?	ಬೆಂಗಳೂರು ನಗರದ ಪೊಲೀಸ್ ಆಯುಕ್ತರು ದಿನಾಂಕ 04-06-2018ರಂದು ಸುತ್ತೋಲೆಯನ್ನು ಹೊರಡಿಸಿದ್ದು (ಪ್ರತಿಯನ್ನು ಲಗತ್ತಿಸಿದೆ) ಸದರಿ ಸುತ್ತೋಲೆಯು ಬೆಂಗಳೂರು ನಗರ ವ್ಯಾಪ್ತಿಗೆ ಮಾತ್ರ ಸಂಬಂಧಪಟ್ಟಿದ್ದು ಈ ಸುತ್ತೋಲೆಯಲ್ಲಿನ ಆದೇಶ / ಸೂಚನೆಗಳು ಶಿವಮೊಗ್ಗ ನಗರಕ್ಕೆ ಅನ್ವಯಿಸುವುದಿಲ್ಲ. ಶಿವಮೊಗ್ಗ ನಗರದಲ್ಲಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಸದರಿ ವಾಹನಗಳ ಮೇಲೆ ಐಎಂವಿ ಪ್ರಕರಣಗಳನ್ನು ದಾಖಲಿಸಿ ಶಿವಮೊಗ್ಗ ನಗರ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದು ಹಾಗೂ ನಗರದ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಮತ್ತು ಸುಗಮ ಸಂಚಾರ ವ್ಯವಸ್ಥೆಯ ಅನುಕೂಲಕ್ಕಾಗಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವಂತಹ ವಾಹನ ಸವಾರರ ವಾಹನಗಳನ್ನು ಮಾತ್ರ ತಡೆದು ಚಾಲನಾ ಪರವಾನಿಗೆ, ವಾಹನಗಳ ವಿಮೆ, ವಾಹನಗಳ ನೋಂದಣಿ ಪುಸ್ತಕ ಇತರೆ ದಾಖಲಾತಿಗಳನ್ನು ತಪಾಸಣೆ ಮಾಡಿ, ಮುಂದಿನ ಕ್ರಮವನ್ನು ಕೈಗೊಳ್ಳುತ್ತಿರುವುದರಿಂದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಒಇ 54 ಪಿಇಎಂ 2019

(ಎಂ.ಬಿ. ಪಾಟೀಲ)
ಗೃಹ ಸಚಿವರು